ಚಿನ್ನು ಮದುವೆಗೆ ಅಸ್ತು ಅಂದಾಕ್ಷಣ ಮನೆಯಲ್ಲಿ ಹಬ್ಬವೇ ಮೊದಲಾಗಿಬಿಟ್ಟಿತು. ಮೊದಲು ಕೊಂಚ ಕಸಿವಿಸಿ ಅನಿಸಿತಾದರೂ, ನನಗೂ ನನ್ನ ಗಂಡನಿಗೂ ವಿಷಯವೊಗ್ಗಿ ಬಂದ ಮೇಲೆ —ಸಡಗರದ ಸರಭರ! ಕಂಡಲ್ಲೆಲ್ಲ ಕಂದುಬಾಳೆ. ಮುದದ ತಳಿರಿನ ತೋರಣ. ದಿಕ್ಕುದಿಕ್ಕಿಗೂ ಸಂಭ್ರಮ. ಸೇರಕ್ಕಿ ಕುದಿಸಿ ಹಾಲುಖೀರು ಮಾಡಿದಷ್ಟು ಖುಷಿ!

‘ಅಲ್ಲರೀ... ಇಷ್ಟು ದಿನ ಬೇಡ ಅಂತ ಒದರಾಡುತಿದ್ದಳಲ್ಲ, ಈಗ ಏನಾಯಿತು ಇವಳಿಗೆ? ಗರ ಬಿದ್ದು ಬದಲಾದಳೋ ಹೇಗೆ?’ ಆಶ್ಚರ್ಯವನ್ನೂ ಸಂಭ್ರಮವನ್ನೂ ಗಂಡನೆದುರು ತೋಡಿಕೊಂಡೆ.

‘ನೀನೂ ಅವಳಷ್ಟೇ ಹಾರಾಡುತಿದ್ದೆಯಲ್ಲೇ, ಮಾರಾಯಿತಿ... ಎಲ್ಲದಕ್ಕೂ ಕಾಲ ಕೂಡಿ ಬರಬೇಕಲ್ಲವಾ?’ ನೀಲಿ ತಡೆತಡೆದು ಹೇಳಿದರು. ‘ಮನಸು ಅನ್ನೋದೇ ಹಾಗಲ್ಲವಾ, ಕನಕವಾರಿ? ಆಗಿಬರಬೇಕು ಅಷ್ಟೇ... ಚಿಟ್ಟೆ ಹುಟ್ಟಿದ ಮೇಲೆ ಹಾರದೇ ಇರೋದುಂಟಾ?’

ಮದುವೆಯೇ ಒಲ್ಲೆನ್ನುವ ಮಗಳಿಗೆ ತಕ್ಕುದಾಗಿ, ಅವಳ ಹೆಜ್ಜೆಗೆ ಸಮಾ ಗೆಜ್ಜೆ ಝುಣಿಸುತ್ತಿದ್ದ —ನನ್ನ ಗಂಡ ನೀಲಿ, ಹೀಗೆ ಒಮ್ಮಿಂದೊಮ್ಮೆ ಮಾತು ಬದಲಿಸಿದ್ದೂ ಸೋಜಿಗವೆನ್ನಿಸಿತು. ಚಿನ್ನು ಹೇಳಿದ್ದಕ್ಕೆಲ್ಲ ಸೈಸೈ ಅನ್ನುತ್ತ —ಆಟದಲ್ಲಿ ತಾನೂ ಥಾಥೈ ನಡೆಸಿದಾತ, ಈಗ ಕುದಿ ತಗ್ಗಿದ ಸಾರಿನಂತಾಗಿಬಿಟ್ಟನೆ? ವಿಚಿತ್ರವೆನಿಸಿತು.

‘ಚಿಟ್ಟೆ ಹುಟ್ಟೋಕೆ ನೀವೇ ಬಿಟ್ಟಿರಲಿಲ್ಲ, ನೀಲಿ... ಅವಳ ಜೊತೆ ನೀವೂ ಆಟಕ್ಕೆ ನಿಂತಿದ್ದಿರಿ...’

ನೀಲಿ ಸುಮ್ಮನೆ ನಸುನಕ್ಕರು. ಆ ನಗುವು, ಎಂದಿನಂತೆಯೇ, ಅವರ ದೊಡ್ಡ ಮೀಸೆಯ ನಡುವೆ ಪುಟ್ಟದಾಗಿ ತೋರಿತು. ಐವತ್ತೆಂಟನೇ ವಯಸ್ಸಿಗೂ ಮನುಷ್ಯ ತುಂಟತನ ಬಿಟ್ಟಿಲ್ಲವೇ?

‘ಯಾಕೆ? ಏನೂ ಹೇಳಲೇ ಇಲ್ಲವಲ್ಲ?’ ಕೆದಕಿ ಕೇಳಿದೆ.

‘ಕಳಿತ ಮೇಲೆ ಕೊಳೀದೇ ಇರೋದು



ಎಸ್.ವಿ. ಹೂಗಾರ